15 158 ನೇ ದಿನ (ಗ)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ, ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್), ಶ್ರೀ ಬಸನಗೌಡ ಬಾದರ್ಲಿ ರವರು ನಿಯಮ 330ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಸೂಚನೆ:-** ರಾಜ್ಯ ಸರ್ಕಾರಿ ನೌಕರರನ್ನು ವಿವಿಧ ಕಾರಣಗಳಿಂದ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಿದ ಆರು ತಿಂಗಳ ನಂತರ ಅಮಾನತ್ತು ಆದೇಶವನ್ನು ತೆರವುಗೊಳಿಸಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದ ಸ್ಥಳದಿಂದ ಬೇರೆ ಜಾಗಕ್ಕೆ ಸ್ಥಳ ನಿಯುಕ್ತಿಗೊಳಿಸಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಿಆಸುಇ 52 ಸೇಇವಿ 2020 ದಿನಾಂಕ: 25.11.2020 ಹಾಗೂ ಸಂಖ್ಯೆ:ಒಇ:31:ಪೊಸಿಪ:2020 ದಿನಾಂಕ: 28.06.2024ರ ಆದೇಶಗಳಲ್ಲಿ 6 ತಿಂಗಳಿಗಿಂತ ಮೀರಿ ಅಮಾನತ್ತು ಆದೇಶದಲ್ಲಿ ಮುಂದುವರೆಸಬೇಕಾದ ಪ್ರಕರಣದಲ್ಲಿ ಕೈಗೊಳ್ಳಬೇಕಾದ ಕ್ರಮದ ಕುರಿತು ಸ್ಪಷ್ಟ ನಿರ್ದೇಶನ ಇದ್ದರು ಯಾವುದೇ ಆದೇಶಗಳನ್ನು ಪಾಲಿಸದೆ ಮಾನ್ಯ ಉಚ್ಚ ನ್ಯಾಯಲಯದ ಆದೇಶಗಳನ್ನು ಉಲ್ಲಂಘಿಸಿ ಕಿಶೋರ್‌ಕುಮಾರ್. ಬಿ.ಕೆ, ಪೊಲೀಸ್ ಇನ್ಸ್‌ಪೆಕ್ಟರ್ (ಐಎಸ್‌ಡಿ) ಬೆಂಗಳೂರು ಇವರನ್ನು ದಿನಾಂಕ: 15.10.2022 ರಂದು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿತ್ತು. ಇವರ ಅಮಾನತ್ತು ಆದೇಶವನ್ನು ಮೂರು ವರ್ಷಗಳಿಗೂ ಅಧಿಕ ಸಮಯ ಯಾವುದೇ ಕ್ರಮ ಕೈಗೊಳ್ಳದೆ ಅಮಾನತ್ತು ಅವಧಿಯಲ್ಲಿನ ಭತ್ಯೆಗಳನ್ನು ನೀಡದೆ ಇರುವುದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಹೋಗಿದ್ದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇವರ ಅಮಾನತ್ತು ಆದೇಶವನ್ನು ಕೊಡಲೇ ತೆರವುಗೊಳಿಸಿ ಸ್ಥಳ ನಿಯುಕ್ತಿಗೊಳಿಸುವಂತೆ ಆದೇಶ ಮಾಡಿದ ನಂತರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ Contempt ಪ್ರಕರಣ ಆದ ಮೇಲೆ ಇವರ ಅಮಾನತ್ತು ಆದೇಶವನ್ನು ತೆರವುಗೊಳಿಸಲಾಗಿದೆ. ಕೋರ್ಟ್ ಆದೇಶವನ್ನು ಪಾಲಿಸದೆ ಇರುವ ಹಾಗೂ ಇಲಾಖಾ ನಿಯಮಗಳನ್ನು ಪಾಲಿಸದೆ ಇರುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ಸರ್ಕಾರದ ಹಲವು ಇಲಾಖೆಗಳಲ್ಲಿ ಐ.ಎ.ಎಸ್. ಐ.ಪಿ.ಎಸ್. ಕೆ.ಎ.ಎಸ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್‌ರಗಳ ಮೇಲೂ ಕೋರ್ಟ್‌ಗಳಲ್ಲಿ ಹಲವು ಕೇಸುಗಳಿದ್ದರೂ ಸಹ ಹಲವು ಅಧಿಕಾರಿಗಳಿಗೆ ಮುಂಬಡ್ತಿಗಳನ್ನು ನೀಡಲಾಗಿದೆ ಮತ್ತು ನೀಡಲಾಗುತ್ತಿದೆ. ಆದರೆ ಇವರಿಗೆ ಕೋರ್ಟ್‌ನಲ್ಲಿ ಕೇಸು ಇದೆ ಎನ್ನುವ ಕಾರಣ ನೀಡಿ ಮುಂಬಡ್ತಿಯನ್ನು ವಿನಾ ಕಾರಣ ತಡೆಹಿಡಿಯಲಾಗಿದೆ. ಇವರ ಮೇಲೆ ಇರುವ ಕೇಸುಗಳಿಗೆ ಕೋರ್ಟ್‌ನಲ್ಲಿ ತಡೆಯಾಜ್ಞೆ ಇದ್ದರೂ ಇವರಿಗೆ ಡಿವೈ.ಎಸ್..ಪಿ ಹುದ್ದೆಗೆ ಇಲಾಖಾ ಬಡ್ತಿ ನೀಡದೆ ತಪ್ಪು ಕಾರಣಗಳನ್ನು ನೀಡಿ ಮುಂಬಡ್ತಿಯನ್ನು ತಡೆಹಿಡಿದು ಅನ್ಯಾಯಕ್ಕೊಳಗಾಗಿರುವ ಪೊಲೀಸ್ ಅಧಿಕಾರಿಗೆ ಕೊಡಲೇ ಡಿವೈಎಸ್‌ಪಿ ಹುದ್ದೆಗೆ ಬಡ್ತಿ ನೀಡಿ ನ್ಯಾಯ ನೀಡಬೇಕೆಂದು ಕೋರಲಾಗಿದೆ.

**ಉತ್ತರ:-** ಶ್ರೀ ಕಿಶೋರ್‌ಕುಮಾರ್.ಬಿ.ಕೆ, ಪೊಲೀಸ್ ಇನ್ಸ್ ಪೆಕ್ಟರ್ (ಐಎಸ್‌ಡಿ) ಬೆಂಗಳೂರು ರವರನ್ನು ಅಪರ ಪೊಲೀಸ್ ಮಹಾ ನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ:ಸಿಬ್ಬಂದಿ-4/34/ಐಎಸ್‌ಡಿ/2022-23, ದಿನಾಂಕ:15.10.2022 ರಲ್ಲಿ ಅಮಾನತ್ತಿನಲ್ಲಿ ಇಡಲಾಗಿದ್ದು, ಸದರಿ ಆದೇಶವನ್ನು ಡಿಜಿ & ಐಜಿಪಿ ರವರ ಆದೇಶ ಸಂಖ್ಯೆ:ಹೆಚ್‌ಆರ್‌ಎಂ-1(8)/76/2022-23, ದಿನಾಂಕ:20.10.2022ರಲ್ಲಿ ಸ್ಥಿರೀಕರಿಸಲಾಗಿರುತ್ತದೆ ಮತ್ತು ಆದೇಶ ದಿನಾಂಕ:17.03.2023ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತಿನ ನಡವಳಿ) ನಿಯಮಗಳು 1965/89ರ ನಿಯಮ 6ರ ಪ್ರಕಾರ ಇಲಾಖಾ ವಿಚಾರಣೆಗೆ ಆದೇಶಿಸಿ, ಪೊಲೀಸ್ ಉಪಾಧೀಕ್ಷಕರು, ಇಲಾಖಾ ವಿಚಾರಣೆಗಳು, ಕೇಂದ್ರ ವಲಯ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ, ದೋಷಾರೋಪಣೆಯನ್ನು ಹೊರಡಿಸಲು ಮತ್ತು ಮಂಡನಾಧಿಕಾರಿಯನ್ನು ನೇಮಿಸಿಕೊಳ್ಳಲು ಅಧಿಕಾರವನ್ನು ನೀಡಲಾಗಿರುತ್ತದೆ.

ಅಮಾನತ್ತಿನ ಆದೇಶದ ವಿರುದ್ಧ ಸದರಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 25080/2023 ಜೊತೆ ರಿಟ್ ಅರ್ಜಿ ಸಂಖ್ಯೆ: 18983/2024 ಗಳನ್ನು ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:10.03.2025 ರ ತೀರ್ಪಿನಲ್ಲಿ ಅಮಾನತ್ತಿನ ಆದೇಶವನ್ನು ರದ್ದುಗೊಳಿಸಿ ಆದೇಶಿಸಿರುತ್ತದೆ. ನಂತರ ಸದರಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಿಂದನಾ ಅರ್ಜಿ ಸಂಖ್ಯೆ: 610/2025 ಅನ್ನು ಸಲ್ಲಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ದಿನಾಂಕ: 10.03.2025 ರ ವಿರುದ್ಧ ಡಿಜಿ & ಐಜಿಪಿ ರವರು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ರಿವ್ಯೂ ಅರ್ಜಿ ಸಂಖ್ಯೆ: 342/2025 ಅನ್ನು ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ನಿಂದನಾ ಅರ್ಜಿ ಸಂಖ್ಯೆ: 610/2025 ಸಿ/ಡಬ್ಲ್ಯೂ ರಿವ್ಯೂ ಅರ್ಜಿ ಸಂಖ್ಯೆ: 342/2025 ಇನ್ ರಿಟ್ ಪಿಟಿಷನ್ ಸಂಖ್ಯೆ: 25080/2023 ಸಿಡಬ್ಲ್ಯೂ ರಿಟ್ ಪಿಟಿಷನ್ ಸಂಖ್ಯೆ: 18989/2024 ರಲ್ಲಿ ತೀರ್ಪು ದಿನಾಂಕ: 07.01.2026 ರಂದು ಈ ಕೆಳಕಂಡಂತೆ ತೀರ್ಪು ನೀಡಿರುತ್ತದೆ:

> "In this case, the review petitioners have made out grounds that there are errors in the judgement. In view of the subsequent developments and the order of the Hon'ble Apex Court, the review petition deserved to be allowed, and accordingly, the order dated:10/03/2025 in WP.No:25080/2023 connected with WP.No:18983/2024 passed by this Court is set aside by reviewing the same in view of discussion made above.
>
> However, considering that the complainant has remained under suspension for more than three years, the Government is directed to revoke the suspension order forthwith, without prejudice to continuation of the departmental enquiry. The Government is at liberty to proceed with the disciplinary proceedings in accordance with law. The Government is directed to re-instate him within one week from the date of this order.
>
> In view of the above directions, the question of consideration of contempt proceedings does not arise, and accordingly, the contempt proceeding is dropped as become infructuous in view of reviewing of the earlier judgement."

ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಡಿಜಿ & ಐಜಿಪಿ ರವರ ಆದೇಶ ಸಂ. ಹೆಚ್ ಆರ್‌ಎಂ-1(8)/76/2022-23, ದಿನಾಂಕ:22.01.2026ರಲ್ಲಿ ಶ್ರೀ ಬಿ.ಕೆ. ಕಿಶೋರ್ ಕುಮಾರ್, ಪೊಲೀಸ್ ನಿರೀಕ್ಷಕರು ಇವರ ವಿರುದ್ಧ ಆದೇಶಿಸಲಾಗಿರುವ ಇಲಾಖಾ ವಿಚಾರಣೆಯನ್ನು ಮುಂದುವರೆಸಿ, ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತಿನಿಂದ ತೆರವುಗೊಳಿಸಿ, ಡಿಎಸ್‌ಬಿ, ಕೆಜಿಎಫ್ ಇಲ್ಲಿಗೆ ಸ್ಥಳ ನಿಯುಕ್ತಗೊಳಿಸಿ ಆದೇಶಿಸಲಾಗಿರುತ್ತದೆ ಹಾಗೂ ಡಿಜಿ & ಐಜಿಪಿ ರವರ ಆದೇಶ ಸಂ.ಹೆಚ್ ಆರ್‌ಎಂ-1(2)/01/2025-26, ದಿನಾಂಕ:03.02.2026 ರಲ್ಲಿ ಕೆಎಸ್‌ಪಿಟಿಎಸ್, ಚನ್ನಪಟ್ಟಣ ಇಲ್ಲಿಗೆ ಸ್ಥಳ ನಿಯುಕ್ತಿಯನ್ನು ಮಾರ್ಪಡಿಸಿದ್ದು, ಸದರಿಯವರು ದಿನಾಂಕ:06.02.2026 ರಂದು ಅಪರಾಹ್ನ ವರದಿ ಮಾಡಿಕೊಂಡಿರುತ್ತಾರೆ.

**ಸದರಿಯವರ ವಿರುದ್ಧ ಈ ಕೆಳಕಂಡ ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಇಲಾಖಾ ವಿಚಾರಣೆಗಳು ಪ್ರಾರಂಭಿಸಲಾಗಿದೆ ಮತ್ತು ಚಾಲ್ತಿ ಶಿಕ್ಷೆಗಳು ಬಾಕಿಯಿರುತ್ತವೆ:**

**ಕ್ರಿಮಿನಲ್ ಪ್ರಕರಣಗಳ ಮಾಹಿತಿ :**

| ಕ್ರಮ ಸಂ | ಕ್ರಿಮಿನಲ್ ಪ್ರಕರಣಗಳ ಮಾಹಿತಿ | ಆರೋಪಿತರು ಸಲ್ಲಿಸಿಕೊಂಡಿರುವ ಕ್ರಿಮಿನಲ್ ರಿವಿಷನ್ ಪಿಟಿಷನ್/ರಿಟ್ ಅರ್ಜಿ | ಪ್ರಸ್ತುತ ಹಂತ |
|---|---|---|---|
| 1 | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅತ್ತಿಬೆಲೆ ಪೊ. ಠಾಣೆಯಲ್ಲಿ ಮೊ ಸಂ . 356/2022 ಕಲಂ 420, 421,423,120(ಬಿ), | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ರಿವಿಷನ್ ಪಿಟಿಷನ್ ಸಂ.88/2026ರಲ್ಲಿ ಪ್ರಕರಣವನ್ನು ವಜಾ | 9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಎಸ್‌ಸಿ **ನಂ.967/2022ರಲ್ಲಿ ವಿಚಾರಣೆಯಲ್ಲಿರುತ್ತದೆ.** ಮಾನ್ಯ ಉಚ್ಚ |

| | | | |
|---|---|---|---|
| | 456,467,468 ಜೊತೆಗೆ 146 ಐಪಿಸಿ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ 1988ರ ಕಲಂ 7(ಎ), 7(ಸಿ) ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಇವರು ಆರೋಪಿ-12 ಆಗಿರುತ್ತಾರೆ. | ಮಾಡುವಂತೆ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. | ನ್ಯಾಯಾಲಯದಲ್ಲಿ ಸಲ್ಲಿಸಿರುವ ಕ್ರಿಮಿನಲ್ ರಿವಿಷನ್ ಪಿಟಿಷನ್ ಸಂ.88/2026ಕ್ಕೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಿದ್ದು, ತಡೆಯಾಜ್ಞೆಯನ್ನು ತೆರವುಗೊಳಿಸುವ ಸಂಬAಧ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಸದರಿ ಪ್ರಕರಣವು ಕಲಂ 173(8) ಸಿ.ಆರ್.ಪಿ.ಸಿ ಅಡಿಯಲ್ಲಿ ತನಿಖಾ ಹಂತದಲ್ಲಿರುತ್ತದೆ. |
| 2 | ಬೆಂಗಳೂರು ನಗರ ವರ್ತೂರು ಪೊ. ಠಾಣೆಯಲ್ಲಿ ಮೊ ಸಂ.234/2022 ಕಲಂ 406, 420, 120(ಬಿ), 456,468, 471 ಜೊತೆಗೆ 34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಇವರು ಆರೋಪಿ-2 ಆಗಿರುತ್ತಾರೆ. | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 31190/2024 ಅನ್ನು ಸಲ್ಲಿಸಿಕೊಂಡಿದ್ದು, ದಿನಾಂಕ:18.12.2024ರಲ್ಲಿ ಸದರಿ ಅರ್ಜಿಯನ್ನು ರಿಟ್ ಅರ್ಜಿ ಸಂಖ್ಯೆ: 19792/2023 ಹಾಗೂ 19757/2023 ಗಳೊಂದಿಗೆ ಸೇರಿಸಲಾಗಿರುತ್ತದೆ. | 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸಿಸಿ ನಂ.2964/2024ರಲ್ಲಿ ವಿಚಾರಣೆಯಲ್ಲಿರುತ್ತದೆ. ಮುಂದಿನ ವಿಚಾರಣೆಯನ್ನು ದಿನಾಂಕ:10.09.2026ಕ್ಕೆ ನಿಗದಿಯಾಗಿರುತ್ತದೆ. |

**<u>ಇಲಾಖಾ ವಿಚಾರಣೆಗಳ ಮಾಹಿತಿ</u> :**

| ಕ್ರಮ ಸಂ | ಇಲಾಖಾ ವಿಚಾರಣೆಗೆ ಆದೇಶಿಸಿದ ಸಂ./ದಿನಾಂಕ | ಆರೋಪ | ನೇಮಿಸಲಾಗಿರುವ ವಿಚಾರಣಾ ಅಧಿಕಾರಿ |
|---|---|---|---|
| 1 | ಡಿಜಿ & ಐಜಿಪಿ ರವರ ಆದೇಶ ಸಂ. ಹೆಚ್‌ಆರ್ ಎಂ1(8)/76/2022-23, ದಿನಾಂಕ:17.03.2023 | ಸದರಿಯವರ ವಿರುದ್ಧ ಅತ್ತಿಬೆಲೆ ಪೊ. ಠಾಣೆಯಲ್ಲಿ ಮೊ ಸಂ.356/2022ರಲ್ಲಿ ಪ್ರಕರಣ ದಾಖಲಾಗಿರುವ ಬಗ್ಗೆ, ಹಾಗೂ ಕರ್ತವ್ಯಕ್ಕೆ ಗೈರುಹಾಜರಿ ಮತ್ತು ನಿಯೋಜಿತ ದಸರಾ ಬಂದೋಬಸ್ತ್ ಕರ್ತವ್ಯಕ್ಕೆ ಗೈರುಹಾಜರಾಗಿರುವ ಹಿನ್ನಲೆಯನ್ವಯ ಸದರಿ ರವರ ವಿರುದ್ಧ ಕೆಎಸ್‌ಪಿ(ಡಿಪಿ) ನಿಯಮಗಳು 1965/89ರ ನಿಯಮ 6ರ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. | ಪೊಲೀಸ್ ಉಪಾಧೀಕ್ಷಕರು, ಇಲಾಖಾ ವಿಚಾರಣೆ, ಕೇಂದ್ರ ವಲಯ ಕಛೇರಿ, ಬೆಂಗಳೂರು. |
| 2 | ಡಿಜಿ & ಐಜಿಪಿ ರವರ ಆದೇಶ ಸಂ. ಹೆಚ್‌ಆರ್‌ಎಂ-1(8)/57/2024-25, ದಿನಾಂಕ:06.11.2025 ಶ್ರೀ ಜೆ.ಎಸ್.ಸೋಮಶೇಖರ, ನಿವೃತ್ತ ಪ್ರಧಾನ ಜಿಲ್ಲಾ & ಸತ್ರ ನ್ಯಾಯಾಧೀಶರು. | ಅತ್ತಿಬೆಲೆ ಪೊ. ಠಾಣೆಯಲ್ಲಿ ಮೊ ಸಂ.356/2022 ಕ್ಕೆ ಸಂಬಂಧಿಸಿದಂತೆ ಸದರಿ ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಎಸ್.ಎಲ್.ಪಿ ಸಂಖ್ಯೆ:20049/2023ರಲ್ಲಿ | ಅಪಾಧಿತ ಸರ್ಕಾರಿ ಅಧಿಕಾರಿಯು ಆದೇಶಿಸಿರುವ ಇಲಾಖಾ ವಿಚಾರಣೆಯ ವಿರುದ್ಧ ಮಾನ್ಯ ಕೆಎಸ್‌ಎಟಿ ಯಲ್ಲಿ ಅರ್ಜಿ ಸಂ. 4777/2025ನ್ನು ಸಲ್ಲಿಸಿಕೊಂಡಿದ್ದು, |

| | | | |
|---|---|---|---|
| | | ಪ್ರಕರಣದ ಅರ್ಜಿಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುವ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ಕೆಎಸ್‌ಪಿ (ಡಿಪಿ) ನಿಯಮಗಳು 1965/89ರ ನಿಯಮ 6ರ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. | ಕಂಡಿಕೆವಾರು ಷರವನ್ನು ದಿನಾಂಕ:19.01.2026 ರಂದು ಸಲ್ಲಿಸಲಾಗಿರುತ್ತದೆ. ಮುಂದಿನ ವಿಚಾರಣೆಯ ದಿನಾಂಕ:07.04.2026 ಇರುತ್ತದೆ. |
| 3 | ಡಿಜಿ & ಐಜಿಪಿ ರವರ ಕಾರಣ ಕೇಳುವ ನೋಟಿಸ್ ಸಂ. ಹೆಚ್‌ಆರ್‌ಎಂ-1(8)/01/2025-26, ದಿನಾಂಕ:23.07.2025 | ಸದರಿ ರವರ ವಿರುದ್ಧ ಬೆಂಗಳೂರು ನಗರ ವರ್ತೂರು ಪೊ. ಠಾಣೆಯಲ್ಲಿ ಮೊ ಸಂ.234/2022 ದಾಖಲಾಗಿದ್ದು, ಈ ಸಂಬಂಧ ಅಧಿಕಾರ ದುರಪಯೋಗ, ನಡೆತ ನಿಯಮಗಳ ಉಲ್ಲಂಘನೆಯ ಸಂಬಂಧ ಸದರಿ ರವರ ವಿರುದ್ಧ ಕೆಎಸ್‌ಪಿ(ಡಿಪಿ) ನಿಯಮಗಳು 1965/89ರ ನಿಯಮ 6ರನ್ವಯ ಇಲಾಖಾ ವಿಚಾರಣೆಗೆ ಕಾರಣ ಕೇಳುವ ನೋಟಿಸ್ ನೀಡಿದೆ. | ಅಪಾಧಿತ ಸರ್ಕಾರಿ ಅಧಿಕಾರಿಯು ಕಾರಣ ಕೇಳುವ ನೋಟಿಸ್‌ಗೆ ತಮ್ಮ ವಿವರಣೆಯನ್ನು ಇದುವರೆವಿಗೂ ಸಲ್ಲಿಸಿರುವುದಿಲ್ಲ. |
| 4 | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 331 ಪಿಇಜಿ 2024, ದಿನಾಂಕ 13.01.2026 | ಶ್ರೀ ಕಿಶೋರ್‌ಕುಮಾರ್, ಪಿ.ಐ. ರವರು, ಸರ್ಜಾಪುರ ಪೊಲೀಸ್ ಠಾಣೆ ಮೊ.ಸಂ.49/2021ರ ಪ್ರಕರಣದಲ್ಲಿ ಕರ್ತವ್ಯಲೋಪವೆಸಗಿರುವ ಆರೋಪಗಳ ಕುರಿತು ಕೆ.ಎಸ್.ಪಿ.(ಡಿಪಿ) ನಿಯಮಗಳು 1965/89ರ ನಿಯಮ 6 ರಡಿ ವಿಧಿ-ವಿಧಾನಗಳನ್ನು ಅನುಸರಿಸಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಎಂ. ಎನ್. ಹೆಗಡೆ ನಗ್ರ, , ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. | ಇಲಾಖಾ ವಿಚಾರಣೆಯು ಬಾಕಿ ಇರುತ್ತದೆ. |

**<u>ಚಾಲ್ತಿ ಶಿಕ್ಷೆಯ ಮಾಹಿತಿ</u>** :

| ಕ್ರಮ ಸಂ | ನಿಯಮ-7ರ ಶಿಸ್ತಿನ ಕ್ರಮದ ಆದೇಶ ಸಂ. ಮತ್ತು ದಿನಾಂಕ | ಆರೋಪ | ವಿಧಿಸಿದ ದಂಡನೆ | ಷರಾ |
|---|---|---|---|---|
| 1 | ಡಿಜಿ & ಐಜಿಪಿರವರ ಆದೇಶ ಸಂ.ಹೆಚ್‌ಆರ್‌ಎಂ-1(8)/59/2022-23, ದಿನಾಂಕ:31.12.2024. | ಬೆಂಗಳೂರು ನಗರ ಪುಟ್ಟೇನಹಳ್ಳಿ ಪೊ.ಠಾಣೆಯ ಮೊ.ಸಂ. 3/2022 ರಲ್ಲಿ ಕರ್ತವ್ಯ | ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವೇತನ ಬಡ್ತಿಗಳಿಗೆ ಪರಿಣಾಮ ಬೀರದಂತೆ ಮೂರು | ಸದರಿಯವರು ದಿನಾಂಕ:15.10.2022 ರಿಂದ 05.02.2026 ರವರೆಗೆ ಅಮಾನತ್ತಿನಲ್ಲಿ ಇದ್ದು, ವಾರ್ಷಿಕ |

| | | | | |
|---|---|---|---|---|
| | | ನಿರ್ಲಕ್ಷತೆ. | ತಿಂಗಳ ಅವಧಿಗೆ ತಡೆಹಿಡಿಯಲಾಗಿರುತ್ತದೆ. | ವೇತನ ಬಡ್ತಿಯನ್ನು ಗಳಿಸದೇ ಇರುವುದರಿಂದ, ಶಿಕ್ಷೆಯು ಜಾರಿಯಾಗಿರುವುದಿಲ್ಲ. |

ಶ್ರೀ ಕಿಶೋರ್‌ಕುಮಾರ್. ಬಿ.ಕೆ, ಪಿಐ, ರವರ ವಿರುದ್ಧ 02 ಕ್ರಿಮಿನಲ್ ಪ್ರಕರಣ ಮತ್ತು 04 ಇಲಾಖಾ ವಿಚಾರಣೆಗಳು ಬಾಕಿ ಇರುವುದರಿಂದ ಹಾಗೂ ದಿನಾಂಕ:31.12.2024 ರಂದು ನೀಡಿದ ಶಿಕ್ಷೆಯನ್ವಯ ಪ್ರಸ್ತುತ ಸದರಿಯವರು ಸರ್ಕಾರದ ಅಧಿಕೃತ ಜ್ಞಾಪನ ಸಂ. ಡಿಪಿಎಆರ್ 23 ಎಸ್‌ಎಸ್‌ಆರ್ 98, ದಿನಾಂಕ:14.07.1999 ರನ್ವಯ ಡಿವೈಎಸ್‌ಪಿ (ಸಿವಿಲ್) ಹುದ್ದೆಗೆ ಮುಂಬಡ್ತಿ ಹೊಂದಲು ಅನರ್ಹರಾಗಿರುತ್ತಾರೆ.

ಸಂಖ್ಯೆ: ಒಇ 140 ಪಿಇಜಿ 2026

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು